ವಿಷಯ : ರಾಮದುರ್ಗದಲ್ಲಿ ಕರ್ನಾಟಕ ಗೃಹ ಮಂಡಳಿ ವತಿಯಿಂದ ಮನೆಗಳ ನಿರ್ಮಾಣಕ್ಕೆ ಯೋಗ್ಯವಲ್ಲದ ಜಮೀನನ್ನು ಖರೀದಿ ಮಾಡಿರುವ ವಿಚಾರ :

ಶ್ರೀ ಯಾದವಾಡ ಮಹಾದೇವಪ್ಪ ಶಿವಲಿಂಗಪ್ಪ (ರಾಮದುರ್ಗ) :- ಮಾನ್ಯ ಅಧ್ಯಕ್ಷರೆ, ನನಗೆ ಶೂನ್ಯ ವೇಳೆಯಲ್ಲಿ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ರಾಮದುರ್ಗ ತಾಲ್ಲೂಕಿನಲ್ಲಿ ಕರ್ನಾಟಕ ಗೃಹ ಮಂಡಳಿಯು ಜಮೀನು ಖರೀದಿಸುವ ವಿಷಯ ನನ್ನ ಗಮನಕ್ಕೆ ಬಂದಾಗ, ಅದು ಮನೆ ಕಟ್ಟಲು ಯೋಗ್ಯವಿಲ್ಲವೆಂದು ನಾನು ಹೇಳಿದ್ದೆ. ಅಲ್ಲಿ ಸವುಳು ಜವುಳು ಉಂಟಾಗಿರುತ್ತದೆ. ಮಲಪ್ರಭಾ ನದಿ ಪ್ರವಾಹ ಬಂದಾಗ ಅಲ್ಲಿ ನೀರಿನಿಂದ ಆವೃತವಾಗುತ್ತದೆ. ಆದ್ದರಿಂದ ಅದನ್ನು ಖರೀದಿಸಬಾರದು ಎಂದು ದಿನಾಂಕ : 13-05-2006 ರಂದು ಕಾರ್ಯನಿರ್ವಾಹಕ ಅಭಿಯಂತರರಿಗೆ ಪತ್ರ ನೀಡಿದ್ದರೂ, ಅದನ್ನು ದಿಕ್ಕರಿಸಿ ದಿನಾಂಕ : 30-05-2006 ರಂದು ಜಮೀನು ಖರೀದಿಸಿದ್ದಾರೆ. ಆ ಜಮೀನು ಖರೀದಿಯಲ್ಲಿ ಅವ್ಯವಹಾರ ಆಗಿರುವುದು ಸ್ಪಷ್ಟವಾಗಿ ಕಂಡು ಬಂದಿರುತ್ತದೆ. ಅಲ್ಲಿನ ನೀರಾವರಿ ಜಮೀನು ಪ್ರತಿ ಎಕರೆಗೆ 45 ಸಾವಿರ ರೂಪಾಯಿ ಕಿಮ್ಮತ್ತು ಆಗುತ್ತದೆ ಎಂದು ನೋಂದಣಿ ಅಧಿಕಾರಿಗಳು ವರದಿ ನೀಡಿದ್ದರೂ, ಅಲ್ಲಿನ ಅಧಿಕಾರಿಗಳು ಪ್ರತಿ ಎಕರೆಗೆ 2.80 ಲಕ್ಷ ರೂ.ಗಳಂತೆ ಖರೀದಿ ಮಾಡಿರುತ್ತಾರೆ. ಕಂಕಣವಾಡಿ ಹತ್ತಿರ ಖರೀದಿಸಿದ ಜಮೀನಿನಲ್ಲಿ ಮನೆಗಳ ನಿರ್ಮಾಣ ಮಾಡುವುದು ಸರಿಯಲ್ಲವೆಂದು ತಹಶೀಲ್ದಾರರು ಮತ್ತು ಗ್ರಾಮಸ್ಥರು ವರದಿ ನೀಡಿದ್ದಾರೆ. ಈ ಖರೀದಿಯನ್ನು ರದ್ದುಗೊಳಿಸಬೇಕು ಮತ್ತು ತಪ್ಪಿತಸ್ಥರ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಹೌಸಿಂಗ್ ಬೋರ್ಡ್ ಎಂ.ಡಿ. ಯವರಿಗೆ ಪತ್ರ ಬರೆದರೂ ಪ್ರಯೋಜನ ಆಗಿರುವುದಿಲ್ಲ. ಮನೆಗಳ ನಿರ್ಮಾಣಕ್ಕಾಗಲಿ, ಜಮೀನು ಉಳಿಮೆ ಮಾಡುವುದಕ್ಕಾಗಲಿ ಯೋಗ್ಯವಿಲ್ಲದ ಜಮೀನನ್ನು ಗೃಹ ಮಂಡಳಿಯವರು ಖರೀದಿಸಿದ್ದಾರೆ. ಅಲ್ಲಿರತಕ್ಕ ಜಮೀನಿನ ಫೋಟೋ ನನ್ನ ಬಳಿ ಲಭ್ಯವಿರುತ್ತದೆ. ಅಲ್ಲಿ ಸವುಳು ಜವುಳು ಉಂಟಾಗುತ್ತದೆ. ಪ್ರತಿ ವರ್ಷವೂ ಜಮೀನಿನಲ್ಲಿ flood ನೀರು ಬರುತ್ತದೆ. ಆ ಏರಿಯಾದಲ್ಲಿ 25-30 ವರ್ಷಗಳಿಂದ ಯಾರೂ ಕೂಡ ಗುತ್ತಿಗೆ ಮಾಡುತ್ತಿಲ್ಲ. ಇಂತಹ ಜಮೀನನ್ನು 2.80 ಲಕ್ಷ ರೂ.ಗಳಿಗೆ ಖರೀದಿ ಮಾಡಿದ್ದಾರೆ. ಅಲ್ಲಿಯ ಜಮೀನು ಪಡಾ ಆಗಿದೆ. ಈ ಬಗ್ಗೆ ಅಧಿಕಾರಿಗಳಿಗೆ ಪದೇ ಪದೇ ಹೇಳಿದರೂ ಕೂಡ, ಅದನ್ನು ನಿರ್ಲಕ್ಷ್ಯತನ ಮಾಡಿದ್ದಾರೆ. ಒಂದು ವೇಳೆ ಅಧಿಕಾರಿಗಳು ಸರಿ ಇದೆ ಎಂದು ಹೇಳಿದರೆ, ನಾನು ಸ್ವತಃ ಇವತ್ತು ರಾಜೀನಾಮೆ ಕೊಟ್ಟು, ಅವರ ಮುಂದೆ ಶರಣಾಗುತ್ತೇನೆ. ಮಾನ್ಯ ಗೃಹ ಸಚಿವರು ಈಗಾಗಲೇ ಅದು ಯೋಗ್ಯವಾಗಿದೆ ಎಂದು ಬರೆದು ಕೊಟ್ಟಿರುತ್ತಾರೆ. ತಾವು ಮುದ್ದಾಂ ಆಗಿ ಅಲ್ಲಿಗೆ ಭೇಟಿ ನೀಡಿ, ಸಮಕ್ಷಮವಾಗಿ ಕುಳಿತು ಚರ್ಚೆ ಮಾಡಿ ಈ ಸಮಸ್ಯೆಯನ್ನು ಬಗೆಹರಿಸಬೇಕೆಂದು ಕೋರುತ್ತೇನೆ. ಇದರ ಬಗ್ಗೆ ನನ್ನ ಹತ್ತಿರ ಎಲ್ಲಾ ಫೋಟೋಗಳಿವೆ.

ಶ್ರೀ ಡಿ.ಟಿ. ಜಯಕುಮಾರ್ (ವಸತಿ ಸಚಿವರು) :-

(ಮಾನ್ಯ ಸಚಿವರ ಲಿಖಿತ ಹೇಳಿಕೆ ಲಗತ್ತಿಸಿದೆ)

ಶ್ರೀ ಮಹಾದೇವಪ್ಪ ಯಾದವಾಡ ಶಿವಲಿಂಗಪ್ಪ :- ಮಾನ್ಯ ಅಧ್ಯಕ್ಷರೆ,....

ಅಧ್ಯಕ್ಷರು :- ಇದರ ಬಗ್ಗೆ ಚರ್ಚೆಗೆ ಅವಕಾಶವಿಲ್ಲ. ಯಾದವಾಡ್‌ರವರೆ, ಶೂನ್ಯ ವೇಳೆಯಲ್ಲಿ ನೀವು ಏನಾದರೂ ಪ್ರಸ್ತಾಪ ಮಾಡಿದರೆ, ಅವರು ಅದಕ್ಕೆ ಉತ್ತರ ಹೇಳುತ್ತಾರೆ. ನೀವು ಮಾನ್ಯ ಸಚಿವರ ಹತ್ತಿರ ಹೋಗಿ ಮಾತನಾಡಿ, ಏನಾದರೂ ಹೆಚ್ಚು ಕಡಿಮೆ ಆಗಿದ್ದರೆ ಸರಿಪಡಿಸಿಕೊಳ್ಳಿ.

ಶ್ರೀ ಮಹಾದೇವಪ್ಪ ಯಾದವಾಡ ಶಿವಲಿಂಗಪ್ಪ :- ದಯಮಾಡಿ ಜಮೀನು ಖರೀದಿಯನ್ನು ರದ್ದು ಮಾಡಬೇಕು.

ಅಧ್ಯಕ್ಷರು :- ದಯವಿಟ್ಟು ನಿಮ್ಮ ವಿಚಾರವನ್ನು ಮಾನ್ಯ ಸಚಿವರ ಬಳಿಗೆ ತೆಗೆದುಕೊಂಡು ಹೋಗಿ ಕುಳಿತು ಚರ್ಚೆ ಮಾಡಿ ಸರಿಪಡಿಸಿಕೊಳ್ಳಿ. ಎಲ್ಲವನ್ನೂ ಇಲ್ಲೇ ಮಾತನಾಡುವುದಕ್ಕಾಗುವುದಿಲ್ಲ.

ಶ್ರೀ ಡಿ.ಟಿ. ಜಯಕುಮಾರ್ :- ಮಾನ್ಯ ಸದಸ್ಯರು ತಮ್ಮ ಬಳಿ ಇರುವ ಮಾಹಿತಿಗಳನ್ನು ತೆಗೆದುಕೊಂಡು ನನ್ನ ಬಳಿ ಬನ್ನಿ. ಇದರ ಬಗ್ಗೆ ಚರ್ಚೆ ಮಾಡಿ ತೀರ್ಮಾನ ತೆಗೆದುಕೊಳ್ಳೋಣ.

ಕರ್ನಾಟಕ ವಿಧಾನ ಸಭೆ

ಶೂನ್ಯ ವೇಳೆಯಲ್ಲಿ ಶ್ರೀ ಮಹಾದೇವಪ್ಪ ಎಸ್. ಯಾದವಾಡ, ವಿಧಾನ ಸಭಾ ಸದಸ್ಯರು ಪ್ರಸ್ತಾಪಿಸಿರುವ ರಾಮದುರ್ಗದಲ್ಲಿ ಕರ್ನಾಟಕ ಗೃಹ ಮಂಡಳಿ ವತಿಯಿಂದ ಮನೆಗಳ ನಿರ್ಮಾಣಕ್ಕೆ ಯೋಗ್ಯವಿಲ್ಲದ ಜಮೀನನ್ನು ಖರೀದಿ ಮಾಡಿರುವ ವಿಚಾರಕ್ಕೆ ಸಂಬಂಧಪಟ್ಟಂತೆ ಮಾನ್ಯ ವಸತಿ ಸಚಿವರ ಹೇಳಿಕೆ :

ಕರ್ನಾಟಕ ಗೃಹ ಮಂಡಳಿ ವತಿಯಿಂದ ಇಲ್ಲಿಯವರೆಗೆ ರಾಮದುರ್ಗ ಪಟ್ಟಣದಲ್ಲಿ ಯಾವುದೇ ವಸತಿ ಯೋಜನೆಗಳನ್ನು ನಿರ್ಮಿಸಿರುವುದಿಲ್ಲ. ಈಗಾಗಲೇ ರಾಜ್ಯದ ಎಲ್ಲಾ ತಾಲ್ಲೂಕು ಪ್ರದೇಶದಲ್ಲಿ ಕರ್ನಾಟಕ ಗೃಹ ಮಂಡಳಿ ವತಿಯಿಂದ ವಸತಿ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ಆದೇಶ ನೀಡಿರುವ ಹಿನ್ನೆಲೆಯಲ್ಲಿ, ಬೆಳಗಾವಿ ಜಿಲ್ಲೆಯ ರಾಮದುರ್ಗ ಪಟ್ಟಣದ ಸುತ್ತಲೂ ನೀರಾವರಿ ಜಮೀನುಗಳಿದ್ದು, ಸಾರ್ವಜನಿಕರಿಗೆ ಅನುಕೂಲವಾಗುವಂತೆ

ಕಂಕಣವಾಡಿ ಗ್ರಾಮದ ಬೆಳಗಾವಿ–ರಾಮದುರ್ಗ ಮುಖ್ಯರಸ್ತೆಗೆ ಹೊಂದಿಕೊಂಡಿರುವ ಸರ್ವೆ ನಂ. 7 ಎ ಹಾಗೂ 8ಎ ರಲ್ಲಿ ಒಟ್ಟು 38–39 ಎಕರೆ ಜಮೀನನ್ನು ಗುರುತಿಸಲಾಯಿತು.

ತತ್ಸಂಬಂಧ ದಿನಾಂಕ : 28–01–2006 ರಂದು ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಭೂ–ಖರೀದಿ ಸಮಿತಿಯ ಸಭೆಯನ್ನು ಆಯೋಜಿಸಲಾಗಿತ್ತು. ಸದರಿ ಸಭೆಯಲ್ಲಿ ಭೂ–ಮಾಲೀಕರು, ಸದರಿ ಜಮೀನುಗಳು ನೀರಾವರಿಯಾಗಿದ್ದು ಹಾಗೂ ಮುಖ್ಯ ರಸ್ತೆಗೆ ಹೊಂದಿಕೊಂಡಿರುವುದರಿಂದ ಪ್ರತಿ ಎಕರೆಗೆ ರೂ. 5–00 ಲಕ್ಷಗಳನ್ನು ನಿಗದಿಪಡಿಸಿದಲ್ಲಿ ಮಾತ್ರ ಕರ್ನಾಟಕ ಗೃಹ ಮಂಡಳಿಗೆ ಮಾರಾಟ ಮಾಡುವುದಾಗಿ ತಿಳಿಸಿದರು. ಆದರೆ ಮಾನ್ಯ ಜಿಲ್ಲಾಧಿಕಾರಿಗಳು ಸುದೀರ್ಘವಾಗಿ ಚೌಕಾಶಿ ಮಾಡಿ ಮುಖ್ಯ ರಸ್ತೆಗೆ ಹೊಂದಿಕೊಂಡಿರುವ ಜಮೀನಿಗೆ ಪ್ರತಿ ಎಕರೆಗೆ ರೂ. 3–00 ಲಕ್ಷದಂತೆ ಹಾಗೂ ಒಳಪಟ್ಟ ಜಮೀನಿಗೆ ಪ್ರತಿ ಎಕರೆಗೆ ರೂ. 2.50 ಲಕ್ಷ ಹಾಗೂ 1.50 ಲಕ್ಷ ಪರಿಗಣಿಸಿ ಸದರಿ ಜಮೀನಿನ ಸರಾಸರಿ ಬೆಲೆ ಪ್ರತಿ ಎಕರೆಗೆ ರೂ. 2.80 ಲಕ್ಷದಂತೆ ನಿಗದಿಪಡಿಸಿ ಒಪ್ಪಿಸಲಾಯಿತು.

ಸದರಿ ಜಮೀನುಗಳನ್ನು ಗೃಹ ಆಯುಕ್ತರು ದಿನಾಂಕ : 02–02–2006 ರಂದು ಜಿಲ್ಲೆಯ ಪ್ರವಾಸದ ವೇಳೆ ಪರಿವೀಕ್ಷಣೆ ಮಾಡಿದ ನಂತರವೇ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಯಿತು. ತದನಂತರ, ದಿನಾಂಕ : 18–05–2006 ರಂದು ಕೇಂದ್ರ ಕಛೇರಿಯಿಂದ ಸದರಿ ಜಮೀನು ಖರೀದಿಸಲು ಹಣ ಬಿಡುಗಡೆ ಮಾಡಲಾಯಿತು.

ಸರ್ಕಾರದಿಂದ 38–39 ಎಕರೆ ಜಮೀನು ಖರೀದಿಸಲು ಅನುಮೋದನೆಗೆ ದೊರೆತರು ಸಹ ವಸತಿ ಯೋಜನೆಗೆ ಯೋಗ್ಯವಿರುವ ಹಾಗೂ ಬೆಳಗಾವಿ–ರಾಮದುರ್ಗ ರಸ್ತೆಗೆ ಹೊಂದಿಕೊಂಡಿರುವ 15 ಎಕರೆ ಜಮೀನನ್ನು ಮಾತ್ರ ಖರೀದಿಸಲಾಯಿತು. ಸದರಿ ಜಮೀನಿನ ಮಣ್ಣಿನ ಮಾದರಿಯನ್ನು ಕೆ.ಎಲ್.ಇ. ತಾಂತ್ರಿಕ ಮಹಾವಿದ್ಯಾಲಯ ಮಣ್ಣು ಪರೀಕ್ಷೆ ಕೇಂದ್ರದಲ್ಲಿ ಪರೀಕ್ಷೆ ಮಾಡಿಸಲಾಯಿತು. ಅದಕ್ಕೆ ಅನುಗುಣವಾಗಿ ವಸತಿ ಯೋಜನೆಯನ್ನು ರೂಪಿಸಲಾಗುವುದು.

ಶ್ರೀ ಎನ್. ಯೋಗೀಶ್ ಭಟ್ :– ಮಾನ್ಯ ಅಧ್ಯಕ್ಷರೆ, ಒಂದೇ ಒಂದು ವಿಷಯದ ಬಗ್ಗೆ ಮಾತನಾಡಲು ದಯಮಾಡಿ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು :– ಮಾನ್ಯ ಭಟ್‌ರವರೆ, ಎದ್ದು ನಿಂತುಕೊಂಡು ಏನು ಬೇಕಾದರೂ ಕೇಳಬಹುದೇ ?

ಶ್ರೀ ಎನ್. ಯೋಗೀಶ್ ಭಟ್ :– ನಾವು ಸದನಕ್ಕೆ ಹೇಗೆ ಬರುವುದು ?